146ನೇ ಅಧಿವೇಶನ
ನಿ-72
ಕ್ರಮ ಸಂಖ್ಯೆ - 145

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಎಸ್. ಎಲ್. ಭೋಜೇಗೌಡ, ಶ್ರೀ ಮರಿತಿಬ್ಬೇಗೌಡ, ಶ್ರೀ ಅರುಣ ಶಹಾಪುರ ಹಾಗೂ ಶ್ರೀ ಆಯನೂರು ಮಂಜುನಾಥ್ ಇವರುಗಳು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ.**

**ವಿಷಯ**

**ಸರ್ಕಾರದ ಆದೇಶ ಸಂಖ್ಯೆ:ED 56 UPC 97 ದಿನಾಂಕ:12.02.2004 ರ ಆದೇಶದ ಅನ್ವಯ ದಿನಾಂಕ:01.04.2006ರ ಒಳಗಡೆ ಸೇವಾ ವಿಲೀನಗೊಂಡ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ಖಾಸಗಿ ಅನುದಾನಿತ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರುಗಳಿಗೆ ಸೇವಾ ಸಕ್ರಮಾತಿ ಹೊಂದುವಾಗ ಅವರುಗಳ ವಯಸ್ಸು 30 ವರ್ಷಗಳಿಗೂ ಅಧಿಕವಿದ್ದು, ಈ ಉಪನ್ಯಾಸಕರುಗಳು ಪ್ರಸ್ತುತ್ತ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 247(ಎ) ರನ್ವಯ ಪಿಂಚಣಿ ಸೌಲಭ್ಯಗಳಿಗಾಗಿ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. (Admissibility of additional weightage under Rule 247A of KCSRs to Government servants drawing UGC, AICTE, ICAR Scales of Pay) ದಿನಾಂಕ:27.11.2019ರ ಸಂಖ್ಯೆ:ED 261 DCE 2018 ರ ಸರ್ಕಾರಿ ಪತ್ರದಲ್ಲಿ ನೀಡಿರುವ ನಿರ್ದೇಶನದಂತೆ ಈ ಸೌಲಭ್ಯವನ್ನು ಸೇವಾ ವಿಲೀನಗೊಂಡ ಅರೆಕಾಲಿಕ ಹಾಗೂ ಸ್ವಾಪ್‌ಗ್ಯಾಪ್ ಉಪನ್ಯಾಸಕರುಗಳಿಗೂ ವಿಸ್ತರಿಸುವ ಕುರಿತು.**

**<u>ಉತ್ತರ</u>**

ಕಾಲೇಜು ಶಿಕ್ಷಣ ಇಲಾಖೆಯ ಅನುದಾನಿತ ಪದವಿ ಕಾಲೇಜುಗಳಲ್ಲಿ 1993-94 ಮತ್ತು 1994-95ನೇ ಸಾಲಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವ ಉಪನ್ಯಾಸಕರುಗಳನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 56 ಯುಪಿಸಿ 97 ದಿನಾಂಕ:12.02.2004 ರನ್ವಯ ಸೇವಾ ವಿಲೀನಗೊಳಿಸಲಾಗಿದೆ. ಅರೆಕಾಲಿಕ ಉಪನ್ಯಾಸಕರಾಗಿ ಸೇವಾ ವಿಲೀನಗೊಳ್ಳುವ ಸಂದರ್ಭದಲ್ಲಿ ಅವರುಗಳ ವಯಸ್ಸು 30 ವರ್ಷಗಳಿಗೂ ಅಧಿಕವಾಗಿದ್ದರೂ ಅವರುಗಳ ಸೇವೆಯನ್ನು ದಿನಾಂಕ:30-05-2012ರ ಸಂಖ್ಯೆ ಆಇ/252/ಸೇ-3/12ರ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವಂತೆ "ತ್ರಿವಿಧ ಲಾಭ ಯೋಜನೆ ನಿಯಮಗಳಡಿ ಒಳಪಡುವ ನೌಕರರು ಹಾಗೂ ಯಾವ ವ್ಯಕ್ತಿಗಳ ಪ್ರಾರಂಭಿಕ ನೇಮಕಾತಿಯು ಅಡ್‌ಹಾಕ್ ಆಧಾರದ ಮೇಲಾಗಿದ್ದು, ನಂತರ ಅವರ ಸೇವೆಯನ್ನು ವಿಲೀನಗೊಳಿಸುವ ಉದ್ದೇಶಕ್ಕಾಗಿ ರಚಿಸಲಾದ ವಿಶೇಷ ನಿಯಮಗಳ ಅಡಿಯಲ್ಲಿ ತರುವಾಯದಲ್ಲಿ ಸರ್ಕಾರಿ ಸೇವೆಯಲ್ಲಿ ವಿಲೀನಗೊಂಡಂತಹ ವ್ಯಕ್ತಿಗಳು" ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 247(ಎ) ನಿಯಮಗಳಡಿ ಹೆಚ್ಚುವರಿ ಅರ್ಹತಾದಾಯಕ ಸೇವಾ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ ಎಂದು ಸೂಚಿಸಲಾಗಿದೆ.

ಸರ್ಕಾರದ ಪತ್ರ ಸಂಖ್ಯೆ:ಇಡಿ 261 ಡಿಸಿಇ 2018, ದಿನಾಂಕ:27.11.2019ರ ಪತ್ರದಲ್ಲಿ ಯುಜಿಸಿ/ಎಐಸಿಟಿಇ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ನೌಕರರ ಪ್ರಕರಣಗಳಲ್ಲಿ ಕೆ.ಸಿ.ಎಸ್.ಆರ್ ನಿಯಮ ಅನ್ವಯವಾಗುವ ಎಲ್ಲಾ ಸರ್ಕಾರಿ ನೌಕರರು ಕೆ.ಸಿ.ಎಸ್.ಆರ್ ನಿಯಮ 247(ಎ) ರನ್ವಯ ಅಧಿಕ ಅರ್ಹತಾದಾಯಕ ಸೇವೆಯನ್ನು ಪಡೆಯಲು ಅರ್ಹರಿರುವುದಾಗಿ ತಿಳಿಸಲಾಗಿದೆ. ಸದರಿ ಸೌಲಭ್ಯವನ್ನು ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಹಾಗೂ ಸ್ವಾಪ್‌ಗ್ಯಾಪ್ ಉಪನ್ಯಾಸಕರುಗಳಿಗೆ ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಇಡಿ 128 ಯುಪಿಸಿ 2021

**(ಡಾ: ಅಶ್ವತ್ಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ,ಐಟಿಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಜೀವನೋಪಾಯಹಾಗೂ
ಉದ್ಯಮಶೀಲತೆ ಸಚಿವರು